ಖಾರವಾಗಿ ಸಾಥ್ ಕೊಡಲು ಉಳಿದವರಿಗೂ ಹಂಚುವ ಪ್ರಮಾಣದಲ್ಲಿ ತರತೊಡಗಿದ್ದು ಒಂದರ್ಥದಲ್ಲಿ ಅವರ ಭಾಗವಹಿಸುವಿಕೆಯನ್ನು ಘೋಷಿಸಿಕೊಂಡಂತಿತ್ತು.

ದಿನಕ್ಕೆ ಎರಡೇ ಎಸರಿನಂತೆ ಯಾವ ಧಾವಂತವಿಲ್ಲದೆ ಒಂದು ತಿಂಗಳು ಆಲೆಮನೆಯೆ ಮನೆಯಾಗಿತ್ತು. ಅರ್ಧ ಕಬ್ಬು ಮಾತ್ರ ಬೆಲ್ಲ ತಯಾರಿಸಲು ಸಿಕ್ಕಿದ್ದರೂ ಪಾಕದಮರಿಗೆ ಮುಕ್ಕಾಲು ತುಂಬಿತ್ತು. ಇನ್ನೊಂದು ದಿನವಾಗಬಹುದಾದಷ್ಟು ಕಬ್ಬಿತ್ತು. ಆವತ್ತು ರಾತ್ರಿ ಪ್ರಸಂಗ ಮುಗಿಸಿದವರಿಗೆ ಡಬ್ಬಿ ತುಂಬುವ ಉಮೇದು ಬಂತು. ಇನ್ನೂ ಬಿಸಿಯಿದೆ, ನಾಳೆ ಹಗಲಿನಲ್ಲಿ ತುಂಬಿದರಾಗದೆ ಅನ್ನುವ ಗೌರಕ್ಕನ ಆಕ್ಷೇಪವನ್ನು ಕೇಳದೆ ಎದ್ದ ರಾಮಣ್ಣನ ಹಿಂದೆ ಆಚಾರಿ ಬೈರ ಬಾಲವಾದರು. ಕೈಬಟ್ಟಲಿಂದ ಮೊಗೆದು ಬಂಗಾರ ಬಣ್ಣದ ಬೆಲ್ಲವನ್ನು ತುಂಬುತ್ತ ತುಂಬುತ್ತ ನಲವತ್ತು ಡಬ್ಬಿಗಳು ಸಾಲುಹಚ್ಚಿದವು. ನೆಟ್ಟಗೆ ನಿಂತು 'ಮುತ್ತಾಚಾರಿ ಈಗಲೆ ಹೇಳಿಬಿಡತೇನೆ, ನಿನಗೆ ಹತ್ತು ಡಬ್ಬಿ. ಬೈರ ನಿನಗೂ ಹತ್ತು ಡಬ್ಬಿ. ಮಜೂರಿ ಬೇರೆ' ಘೋಷಿಸಿದರು. ಔದಾರ್ಯಕ್ಕೆ ನಲುಗುವ ಮುಖಭಾವ ನೋಡಿ 'ಇದು ಈ ವರ್ಷಕ್ಕೇ ಮುಗಿಯಲಿಲ್ಲರೋ. ಇನ್ನು ಪ್ರತಿವರ್ಷ ನಾವು ಸೇರಿಯೆ ಮಾಡಲಿರೋ ಕೆಲಸ. ಮುಂದಿನ ಸಾರಿ ಇದರ ಎರಡುಪಟ್ಟು ಕಬ್ಬು ಹಾಕುವವ ನಾನು. ಮತ್ತೆ ಮಾತಾಡ್ಬೇಡಿ' ಅಂತ ತಾಕೀತು ಮಾಡಿದರು.

ಬೆಳಿಗ್ಗೆ ಬೈರ ಒಲೆಯ ಹತ್ತಿರ ಬೆಂಕಿ ಸರಿಮಾಡುತ್ತಿದ್ದ. ಮುತ್ತಾಚಾರಿ ಗಾಣದ ಬುಡದಲ್ಲಿ ಕೀಲೆಣ್ಣೆ ಬಿಡುತ್ತ ಕೂತಿದ್ದ. ಬೆಲ್ಲದ ಡಬ್ಬಿ ಹತ್ತಿರ ಕೂತಿದ್ದ ಗೌರಕ್ಕ ಕೇಳಿದಳು: 'ನಮಗೆ ಇಪ್ಪತ್ತು ಡಬ್ಬಿ ಏನು ಮಾಡಲಿಕ್ಕೆ? ಮಾರತೀರಾ?' 'ಥೋ! ಮಾರೊ ಪ್ರಶ್ನೆಯೆ ಇಲ್ಲ. ಬೇರೆ ಯೋಜನೆ ಇದೆ ನನ್ನಲ್ಲಿ' ಅಂದರು. 'ಅಲ್ಲ, ಯಾರೂ ಮಾತು ಕೇಳುತ್ತಿಲ್ಲ ಅಂತ ಮಕ್ಕಳಮೇಲೆ ಸಿಟ್ಟಾ? ಹಟ ಸಾಧಿಸ್ತಾ ಇಲ್ಲ ಅಲ್ಲವಾ?' ಹೆಂಡತಿಯ ಅನುನಯದ ಪ್ರಶ್ನೆಗೆ ಶಾಂತ ಸ್ವರದಲ್ಲಿ ನುಡಿದರು: 'ಅಲ್ವೇ ಗೌರಾ, ಹಟ ಸಾಧಿಸೊ ಮನಃಸ್ಥಿತೀಲಿರೋರಿಗೆ ಇಷ್ಟು ಖುಷಿಯಾಗಿ ನಿರುಂಬಳವಾಗಿರಲಿಕ್ಕೆ ಸಾಧ್ಯವೇನೆ? ಹುಚ್ಚಿ, ದಡ್ಡಿ ನೀನು. ನೋಡು ಬೀಗರ ಮನೆಗೆ ಎರಡೆರಡು ಡಬ್ಬಿ ಕೊಡುವ. ಸೀಮೇ ತೇರಲ್ಲಿ ಬಿಸಲಲ್ಲಿ ಬರೋ ಜನಕ್ಕೆ ಪಾನಕಕ್ಕೆ ಎರಡು ಡಬ್ಬಿ ಕೊಡುವಾ ಅಂತ...' ಗೌರಕ್ಕ ಯೋಚನೆಗೆ ಬಿದ್ದಳು. ಮಕ್ಕಳು ಅವರ ಸುಖದಲ್ಲಿ ಅವರಿರ್ಲಿ, ನಮ್ಮ ಸುಖ ನಾವು ಕಂಡುಕೊಳ್ಳುವ ಅಂತ ಇವರದಾ... ಇದು ಒಂಥರಾ ಬಿಡುಗಡೆಯಾ? 'ಬಿಡುಗಡೆಯಾ?' ಶಬ್ದ ಅಪ್ರಯತ್ನವಾಗಿ ಉಚ್ಚರಿಸಿಹೋಗಿ ತನ್ನತ್ತ ತಿರುಗಿದ ಗಂಡನ ಮುಖವನ್ನು ನೋಡಿದಳು. ಶಿರಡಿಯ ರಸ್ತೆಯಲ್ಲಿ ಅರಳಿದ ಅದೇ ಪ್ರಸನ್ನತೆ ಈಗಲೂ ಅರಳಿಕೊಳ್ಳುತ್ತಿತ್ತು.

## ಬನವಾಸಿ ವೆಂಕಟೇಶ ದೀಕ್ಷಿತ

ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರು ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬಿ.ಎಸ್ಸಿ.ವರೆಗೆ ವಿದ್ಯಾಭ್ಯಾಸ. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಅಲ್ಲಿಂದ ಭಾರತೀಯ ಸೇನೆ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಸೇವೆಗೆ ಸೇರಿ ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಲೇಖಕರ ಪ್ರಕಟಿತ ಕಥಾ ಸಂಕಲನ 'ಕಾವಡಿ'.